**OS No.193/2021, Pw1**

**<u>ಸಾಕ್ಷಿಯನ್ನು ಕರೆಸಿ ದಿನಾಂಕಃ 18.06.2026 ದು ಪ್ರಮಾಣ ವಚನ ಬೋಧಿಸಲಾಯಿತು.</u>**

**ಮುಖ್ಯವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ಈ ದಾವೆಯಲ್ಲಿ ವಾದಿಯಾಗಿರುತ್ತೇನೆ. ಹಾಗೂ ನಾನು ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರವನ್ನು ಹಾಜರುಪಡಿಸುತ್ತಿದ್ದು ಅದರಲ್ಲಿರುವ ವಿಷಯಗಳು ಸತ್ಯವಾಗಿದ್ದು ಅದಲ್ಲಿರುವ ಸಹಿಗಳು ನನ್ನ ಸಹಿಗಳಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ವಂಶವೃಕ್ಷದ ನೋಟರಿ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ದಿಃ01.02.1963 ರ ನೊಂದಾಯಿತ ಅಡಮಾನ ಪತ್ರದ ದೃಡಿಕೃನ ನಕಲು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, ದಿಃ08.03.1965 ರ ನೊಂದಾಯಿತ ಅಡಮಾನ ಪತ್ರದ ದೃಡಿಕೃನ ನಕಲು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು, ದಿಃ30.06.2020 ರ ತಿಳುವಳಿಕೆ ಪತ್ರ ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು, ಮೂರು ರಶೀದಿಗಳನ್ನು ಒಟ್ಟಾಗಿ ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು, ಅಂಚೆ ಲಕೋಟೆ ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇದೆ ಎಂದು ಒಪ್ಪಿದೆ.**

**Sd/-**

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**